**ಇಂದು ದಿನಾಂಕಃ 07-09-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಎನ್.ಹೆಚ್.ಆರ್. ವಕೀಲರಿಂದಃ-</u>**

ನಾಲಿಯ ಕಾರಣಕ್ಕಾಗಿ ಈ ದಾವೆಯನ್ನು ವಾದಿ ಹೂಡಿದ್ದಾರೆ. ನನ್ನ ಮನೆಯ ಎದುರು 1 ನೇ ಪ್ರತಿವಾದಿಯ ಮನೆ ಇದೆ. 1 ನೇ ಪ್ರತಿವಾದಿಯ ಮನೆ ಸಂಖ್ಯೆ ನನಗೆ ಗೊತಿಲ್ಲ. ನಾನು ವಾದಿ ಅನ್ಯೂನ್ಯವಾಗಿ ಇದ್ದೇವೆ ಎಂದರೆ ಸರಿ.ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಸಹ ನನ್ನ ನಮ್ಮ ಜೂತೆ ಅನ್ಯೂನ್ಯವಾಗಿ ಇದ್ದಾರೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿಯ ನಾನು ವಿಚ್ಛೇದನೆಗೆ ಅರ್ಜಿಯನ್ನು ಹೂಡಿದ್ದೇನೆ. ಸದರಿ ಅರ್ಜಿಯಲ್ಲಿ ವಾದಿ ನನಗೆ ಸಹಾಯ ಮಾಡುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಅರ್ಜಿಯನ್ನು ಹೈದ್ರಾಬಾದನಲ್ಲಿ ಹೂಡಿದ್ದೇನೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ಮನೆಯ ವಿಸ್ತೀರ್ಣ ನನಗ ಹೇಳಲು ಬರುವುದಿಲ್ಲ. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಮನೆ ವಾದಿಯ ಮನೆ ಆಗಿರುತ್ತದೆ ಎಂದರೆ ಸರಿ. ಸದರಿ ಭಾವಚಿತ್ರವನ್ನು ನಿಡಿ-1

ಎಂದು ಗುರುತಿಸಲಾಯಿತು. ಈಗ ನೋಡುತಿರುವ ಭಾವಚಿತ್ರದಲ್ಲಿರು ಮನೆ 1 ನೇ ಪ್ರತಿವಾದಿಯ ಮನೆ ಎಂದರೆ ಸರಿ. ಸದರಿ ಭಾವಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿಯ ಮನೆಯ ಹೆಬ್ಬಾಗಿಲು ಪೂರ್ವ ದಿಕ್ಕಿಗೆ ಇದೆ ಎಂದರೆ ಸರಿ. ವಾದಿಯ ಮನೆ ಹೆಬ್ಬಾಗಿಲು ದಕ್ಷಿಣಕ್ಕೆ ದಿಕ್ಕಿಗೆ ಇದೆ ಎಂದರೆ ಸರಿ. ನಿಡಿ-1 ರ ಭಾವಚಿತ್ರದಲ್ಲಿರುವ ಬಾಗಿಲ ವರೆಗೆ ವಾದಿಯ ಮನೆ ಇರುತ್ತದೆ ಎಂದರೆ ಸಾಕ್ಷಿ ಬಾಗಿಲ ಮುಂದೆ ಇರುವ ಸ್ಥಳ ಸಹ ವಾದಿಯದೆ ಎಂದು ನುಡಿಯುತ್ತಾರೆ. ಈಗ ನೋಡುತಿರುವ ನಿಡಿ-1 ರ ರಲ್ಲಿರುವ ನಳ ವಾದಿಯ ಅಣ್ಣನಾದ ಬಸಯ್ಯಾ ಉಪಯೋಗಿಸುತ್ತಾರೆ ಎಂದರೆ ಸರಿ.

ಈಗ ನೋಡುತಿರುವ ಭಾವಚಿತ್ರದಲ್ಲಿರು ಮನೆ 1 ನೇ ಪ್ರತಿವಾದಿಯದು ಎಂದರೆ ಸರಿ. ಸದರಿ ಭಾವಚಿತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿಡಿ-3 ರಲ್ಲಿರುವ ಗೋಡೆ ಹಾಗೂ ನಳದ ಮಧ್ಯ ನಾಲ್ಕು ಫೀಟ್ ಅಂತರ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಳ ಮತ್ತು ಗೊಡೆ ನಾಲಿಯ ಮೇಲೆ ಈಗೀಗ ನಿರ್ಮಾಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-3 ರಲ್ಲಿರುವ ಗೊಡೆ ಹಾಗೂ ನಳದ ಮಧ್ಯ ಇರುವ ಸ್ಥಳದಲ್ಲಿ ನೀರು ಹೋಗುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯ ಮನೆಯ ಮುಂದೆಯಿಂದ ನೀರು ಹೋಗುತ್ತವೆ ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರ ಭಾವಚಿತ್ರದಲ್ಲಿ ಇರುವ ಗೋಡೆಯ ಪಕ್ಕ ಕಲ್ಲು ಹಾಗೂ ಮಣ್ಣು ಇದ್ದ ಕಾರಣ ನಳದ ಪಕ್ಕದಿಂದ ನೀರು ಹೋಗುತ್ತಿವೆ ಎಂದರೆ ಸಾಕ್ಷಿ ವಾದಿಯ ಮನೆ ಮುಂದೆ ಇರುವ ಖಾಲಿ ಜಾಗದಿಂದ ಮೆಟ್ಟಿಲು ಇಂದ ನೀರು ಹೊಗುತ್ತವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಮನೆ ಪಕ್ಕದದಿಂದ ನೀರು ಹೋಗದಿದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಗ್ರಾಮ ಪಂಚಾಯತಿವತಿಯಿಂದ ಸರಕಾರದಿಂದ ನಾಲಿ ಮಾಡುತ್ತಾರೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯ ಮನೆ ಇದ್ದ ಕಾರಣ ನಾಲಿ ನಿರ್ಮಾಣಿಸಲು ಬಿಡುತಿಲ್ಲ ಎಂದು ನುಡಿಯುತ್ತಾರೆ.1 ನೇ ಪ್ರತಿವಾದಿಯ ಸೇಡು ತೀರಿಸಿಕೊಳ್ಳುಲು ಈ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿಗೆ ಯಾವದೇ ರೀತಿ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-2 ರ ಭಾವಚಿತ್ರದಲ್ಲಿ ರುವ ಮನೆ 1 ನೇ ಪ್ರತಿವಾದಿಯ ಒಂದೆ ಮನೆ ಇರುತ್ತದೆ ಎಂದರೆ ಸಾಕ್ಷಿ ಸದರಿ ಮನೆಯ ಪಕ್ಕದಲ್ಲಿ ಇನ್ನೂ ಎರಡು ಮನೆ ಇರುತ್ತವೆ ಎಂದು ನುಡಿಯುತ್ತಾರೆ.

ಈಗ ನೋಡುತಿರುವ ನಿಡಿ-2 ರ ಭಾವಚಿತ್ರದಲ್ಲಿರುವ 1 ನೇ ಪ್ರತಿವಾದಿಯ ಮನೆಯ ಮೆಟ್ಟಿಲಿನ ಪಕ್ಕದಲ್ಲಿ ರಸ್ತೆ ಇದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**